
## ಪದಬಂಧ




**ಎಡದಿಂದ ಬಲಕ್ಕೆ**

1. ಅಬ್ಬರಿಸಿ ಬಂದವನನ್ನು ಅಡಗಿಸಿದ್ದಕ್ಕೆ ಹೀಗೊಂದು ಪ್ರಶಂಸಾ ಹೆಸರು 4
3. ರಂಗು ರಂಗಿನಾಟ ನಡೆಸುತ್ತಿದ್ದವರ ಮಧ್ಯೆ ಒಂದು ಸರ್ಪ ಹಿಂದುಮುಂದು 3
4. ಸುರಿದಿದ್ದ ಹಿಮವನ್ನೆಲ್ಲ ಮಾಯ ಮಾಡಿದ್ದು ಅವನ ಪ್ರಭಾವೀ ಗುಣ 3
6. ದುಷ್ಟತನವೊಂದೇ ಅಲ್ಲ; ಆತನ ತಮ್ಮನಿಗೆ ಧೈರ್ಯವೂ ಇದೆ 4
7. ಹೆಸರೆತ್ತಿದರೇ ಆತಂಕ ತರುತ್ತಾನೆ ಮೃತ್ಯು ದೇವತೆ 3
9. ಬೆಲ್ಲದ ವ್ಯಾಪಾರಕ್ಕೆ ನಿಂತಿದ್ದಾಳೆ ಇನ್ನೂ ಚಿಕ್ಕ ಹುಡುಗಿ 3
11. ಸಾಕ್ಷ್ಯವೇನೂ ಬೇಕಿಲ್ಲ; ಆಕೆಯ ಹೆಸರಿನಲ್ಲೇ ಇದೆ, ಒಳ್ಳೆಯ ನಡವಳಿಕೆ 3
13. ನಸು ನಸುವೇ ನಿಜವಾಗುತ್ತಿದೆ ಅವನ ಕನಸು 3
15. ಗ್ರಹಗಳನ್ನು ಪೂಜಿಸಿಯೂ ಕೃಪೆ ಗಳಿಸಬಹುದೇ? 4
17. ತುಂಬ ಕೋಮಲ ಸ್ವಭಾವದವಳು, ಈ ಧನ ದೇವತೆ 3
18. ಎಲ್ಲರನ್ನೂ ಮೂರ್ಖರನ್ನಾಗಿಸಿ ಹಿಂದುಮುಂದಾದ ಆತನ ಮಗ 3
19. ಎಲ್ಲರನ್ನೂ ಕರೆತರುವ ಕಾರ್ಯವೆಲ್ಲ ಮುಗಿದ ನಂತರ.... 4

**ಮೇಲಿನಿಂದ ಕೆಳಕ್ಕೆ**

1. ಅಂದಿನಿಂದಲೂ ಅದೇ ಸಂಪ್ರದಾಯ ಅದಕ್ಕೆ ಆರಂಭವೇ ಇಲ್ಲ 3
2. ಅವನು ಸಲ್ಲಿಸಿದ್ದು ಮನಪೂರ್ವಕ ವಂದನೆ 3
3. ಹರಿತವೇ ಇಲ್ಲದ್ದು, ಈ ಚಾಕು ಇನ್ನೇಕೆ? 3
5. ಮಾಲೂರಿನಲ್ಲಿ ಎಲ್ಲರೊಡನೆಯೂ ಮೆತ್ತಗಿನ ಮಾತು 3
7. ಆಂಜನೇಯನಂತೆ ಜಿಗಿದಾಡಿ ಎಲ್ಲರನ್ನೂ ಹೆದರಿಸು 3
8. ಕೋಪವೇನಿಲ್ಲ; ಕಾವೇರಿಯ ಜೊತೆಗೂಡುವ ಒಂದು ಪ್ರಸಿದ್ಧ ನದಿ 3
9. ಬೆಳಗಿನಲ್ಲೇ ಅರ್ಪಿಸಿದ್ದು; ಇದು ವ್ರತದ ಕಾಣಿಕೆ 3
10. ಖಂಡಿಸುತ್ತ ಹೋಗು; ಆ ದುಷ್ಟ ವ್ಯೂಹವನ್ನು ಹಾಳಾಗಿಸು 3
12. ಅಲ್ಲಿನ ಶಿಲೆಗಳೆಲ್ಲ ತಣ್ಣಗೋ ತಣ್ಣಗೆ 3
14. ಕನಸುಗಳನ್ನು ಕಾಣಲು ತುಂಬ ಪ್ರಶಸ್ತ ಕಾಲ 3
15. ಆತ್ಮ ಶಕ್ತಿಯನ್ನು ಬೆಳೆಸಿಕೊಂಡವನ ಸಾಮರ್ಥ್ಯಕ್ಕೆ ಮಿತಿಯೇ ಇಲ್ಲ 3
16. ಬಗೆಹರಿಯದ್ದು ಏನೂ ಇಲ್ಲ : ಅವನದು ಇನ್ನೂ ತಾರುಣ್ಯ 3

---

### 27–02–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅತ್ಯಧಿಕ 3. ಹವನ 4. ಪದ್ಧತಿ 6. ಲಟಾಪಟಿ 7. ತುತ್ತತುದಿ 9. ಆಸುಪಾಸು 11. ತರಕಲು 13. ಯಜಮಾನ 15. ಅಂತರ್ಧಾನ 17. ಮೆರಗು 18. ಕಾತುರ 19. ಲಕ್ಷಾಂತರ

**ಮೇಲಿನಿಂದ ಕೆಳಕ್ಕೆ**

1. ಅನಲ 2. ಕಪಟಿ 3. ಹಳತು 5. ತಿನಿಸು 7. ತುಡಿತ 8. ದಿಗಿಲು 9. ಆದಾಯ 10. ಸುಮ್ಮಾನ 12. ಕಡಿಮೆ 14. ಜರ್ಜರ 15. ಅಂಗುಲ 16. ನಕಾರ


ಪ್ರಶ್ನಾಂಕಣ

# ಶುಕ್ರ ಗ್ರಹ: ಏಕೆ ಇಷ್ಟು ಹೊಳಪು?

ನಮ್ಮ ಸೌರವ್ಯೂಹದ ಎಂಟೂ ಗ್ರಹಗಳಲ್ಲಿ ಶುಕ್ರ ಗ್ರಹದ್ದೇ ತೀಕ್ಷ್ಣ ಮಟ್ಟದ ಗರಿxfQ ಹೊಳಪು. ಎಷ್ಟೆಂದರೆ, ಸೌರವ್ಯೂಹದಲ್ಲಿ ಭೂಮಿಯಿಂದ ಗೋಚರಿಸುವಂತೆ ಹೊಳಪಿನಲ್ಲಿ ಸೂರ್ಯ ಮತ್ತು ಚಂದ್ರರ ನಂತರ ಶುಕ್ರಗ್ರಹದ್ದೇ ಮೂರನೆಯ ಸ್ಥಾನ. ಈ ಗ್ರಹದ ಇಂಥ ಹೊಳಪಿಗೆ ಏನು ಕಾರಣ?

ಅದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಭೂಮಿಗೂ ಶುಕ್ರ ಗ್ರಹಕ್ಕೂ ಇರುವ ದೂರ. ಸೂರ್ಯನಿಗೂ ಹತ್ತಿರವಾಗಿ (ಶುಕ್ರ ಬುಧನ ನಂತರದ ಸ್ಥಾನದಲ್ಲಿದೆ) ಇರುವ ಶುಕ್ರ ಗ್ರಹ ಭೂಮಿಗೆ ಅತ್ಯಂತ ಹತ್ತಿರದಲ್ಲಿರುವ ಗ್ರಹವಾಗಿದೆ. ಭೂಮಿಗೂ ಶುಕ್ರ ಗ್ರಹಕ್ಕೂ ಇರುವ ಸರಾಸರಿ ಅಂತರ 40 ದಶಲಕ್ಷ ಕಿ.ಮೀ. ಸೂರ್ಯನಿಗೂ ಹತ್ತಿರವಾಗಿ ನಮಗೂ ಹತ್ತಿರವಾಗಿದ್ದು ಸೂರ್ಯನಿಂದ ಪಡೆವ ವಿಪರೀತ ಪ್ರಮಾಣದ ಬೆಳಕನ್ನು ಪ್ರತಿಫಲಿಸುವುದರಿಂದ (ಗ್ರಹ, ಉಪಗ್ರಹಗಳಿಗೆ ಸ್ವಯಂ ದೀಪ್ತಿ, ಎಂದರೆ ತಮ್ಮದೇ ಬೆಳಕು ಇಲ್ಲ) ಶುಕ್ರ ಗ್ರಹ ಉಜ್ವಲವಾಗಿ ಕಾಣುತ್ತದೆ.

ಎರಡನೆಯದಾಗಿ, ಸ್ವಯಂ ದೀಪ್ತವಲ್ಲದ ಪ್ರತಿ ವಸ್ತುವೂ ಅದರ ಮೇಲ್ಮೈನ ದ್ರವ್ಯ ಸಂಯೋಜನೆಯನ್ನಾಧರಿಸಿ ಅದರ ಮೇಲೆ ಬೀಳುವ ಬೆಳಕಿನ ಒಂದಷ್ಟು ಪ್ರಮಾಣವನ್ನು ಪ್ರತಿಫಲಿಸುತ್ತದೆ. ಈ ಪ್ರತಿಫಲನಾ ಸಾಮರ್ಥ್ಯ ಹೆಚ್ಚು ಇದ್ದಷ್ಟೂ ವಸ್ತು ಹೆಚ್ಚು ಉಜ್ವಲವಾಗಿರುತ್ತದೆ. ಈ ಪ್ರತಿಫಲನಾ ಸಾಮರ್ಥ್ಯದ ಸೂಚ್ಯಂಕವನ್ನು (ಆಲ್ಬೆಡೋ) ಶೇಕಡ ಮಾನದಲ್ಲಿ ನಿರೂಪಿಸುವ ಕ್ರಮ ಇದೆ. ಉದಾಹರಣೆಗೆ ಒಂದು ವಸ್ತುವಿನ ಆಲ್ಬೆಡೋ ಶೇಕಡ 15 ಎಂದರೆ ಆ ವಸ್ತು ಅದರ ಮೇಲೆ ಪತನವಾಗುವ ಒಟ್ಟೂ ಬೆಳಕಿನ ಶೇಕಡ 15 ರಷ್ಟು ಬೆಳಕನ್ನು ಪ್ರತಿಫಲಿಸುತ್ತದೆ ಎಂದರ್ಥ. ಆ ಪ್ರಕಾರ ಬುಧ ಗ್ರಹದ ಆಲ್ಬೆಡೋ ಶೇ.12; ಶುಕ್ರ ಗ್ರಹದ ಆಲ್ಬೆಡೋ ಶೇ. 75; ಭೂಮಿಯದು ಶೇ. 30; ಮಂಗಳ ಶೇ. 29; ಗುರು ಶೇ. 52; ಶನಿ ಶೇ. 47; ಯುರೇನಸ್ ಶೇ. 50 ; ನೆಪ್ಚೂನ್ ಶೇ. 41; ನಮ್ಮ ಚಂದ್ರನ ಆಲ್ಬೆಡೋ ಶೇ 9.




ಸ್ಪಷ್ಟವಾಗಿಯೇ ಗ್ರಹಗಳಲ್ಲೆಲ್ಲ ಶುಕ್ರ ಗ್ರಹದ್ದೇ ಅತ್ಯಂತ ಹೆಚ್ಚು ಆಲ್ಬೆಡೋ. ಅದಕ್ಕೆ ಕಾರಣ ಶುಕ್ರ ಗ್ರಹದ ಮೇಲ್ಮೈ ಅನ್ನು ಗಂಧಕಾಮ್ಲ ಭರಿತ ದಟ್ಟ ಮೋಡಗಳು ಆವರಿಸಿವೆ (ಚಿತ್ರ 1). ಈ ಮೋಡಗಳು ಸೂರ್ಯನ ಬೆಳಕು ನೆಲವನ್ನು ಮುಟ್ಟುವ ಮೊದಲೇ (ಚಿತ್ರ 3) ತಾವೇ ಪ್ರತಿಫಲಿಸಿಬಿಡುತ್ತವೆ. ಅದಕ್ಕೇ ಶುಕ್ರದ ಆಲ್ಬೆಡೋ ಅತ್ಯಂತ ಹೆಚ್ಚು. ಹಾಗಾಗಿಯೇ ಶುಕ್ರ ಅತ್ಯಂತ ಉಜ್ವಲ. ನಮ್ಮ ಚಂದ್ರ ನಮ್ಮಿಂದ ನಾಲ್ಕೇ ಲಕ್ಷ ಕಿ.ಮೀ ದೂರದಲ್ಲಿದೆ. ಆದ್ದರಿಂದಲೇ ಅದರ ಆಲ್ಬೆಡೋ ಶೇ. 9ರಷ್ಟು ಅಲ್ಪವೇ ಆದರೂ ಅದು ಶುಕ್ರನಿಗಿಂತ ಹೆಚ್ಚು ಉಜ್ವಲ. ಇಲ್ಲೊಂದು ವಿಶೇಷ: ಶನಿ ಗ್ರಹದ ಉಪಗ್ರಹಗಳಲ್ಲೊಂದಾದ 'ಎನ್ಸಿಲಾಡಸ್'ನ ಆಲ್ಬೆಡೋ ಶೇ. 100! ಆದರೆ ಆ ಚಂದ್ರ ನಮ್ಮಿಂದ 1,272 ಶತಕೋಟಿ ಕಿ.ಮೀ ದೂರದಲ್ಲಿರುವುದರಿಂದ ನಮಗೆ ಬರಿಗಣ್ಣಿಗೆ ಅಗೋಚರ.

■ ಎನ್. ವಾಸುದೇವ್